ಇದಾಗಿ ವಾರ ಕಳೆಯಿತು. ತಿಂಗಳು ಕಳೆಯಿತು. ಪಾಶಣ್ಣ ತನ್ನ ಕೆಲಸಬಿಟ್ಟು ಫಾರೆಸ್ಟರ್ ಚನ್ನಪ್ಪನ ಆಫೀಸಿಗೆ ಅಲೆದಾಡತೊಡಗಿದ. ಯಾವ ಪ್ರಗತಿಯೂ ಆಗಲಿಲ್ಲ. ಪರಿಹಾರದ ಸುಳಿವೇ ಇಲ್ಲ. ಒಂದು ದಿನ ಕೇಳಿಯೇ ಬಿಟ್ಟ: ''ಪರಿಹಾರ ಬರುತ್ತೋ ಇಲ್ವೋ? ಏನಾಗಿದೆ, ಹೇಳ್ರೀ?''

"ಸರಕಾರದ ದುಡ್ಡು ಅಂದ್ರೆ ಸುಲಭ ಏನ್ರೀ. ಮೇಲಿಂದ ಬರಬೇಕು. ಬರುತ್ತೆ ತಡಕೊಳ್ಳಿ. ಗಡಿಬಿಡಿ ಮಾಡಬಾರ್ದು.'' ಈ ಮಧ್ಯೆ ಇನ್ನೊಂದು ಬೆಳವಣಿಗೆ ಆಗುತ್ತಿರುವುದು ಪಾಶಣ್ಣನ ಗಮನಕ್ಕೆ ಬಂತು. ಪಾಶಣ್ಣನ ತೋಟಕ್ಕೆ ಫಾರೆಸ್ಟರ್ ಚನ್ನಪ್ಪ ಮತ್ತು ಸಿಬ್ಬಂದಿ ಭೇಟಿ ನೀಡಿದ್ದು, ಪರಿಹಾರದ ಹಣ ಬರುತ್ತದೆನ್ನುವುದು ಊರಲ್ಲೆಲ್ಲಾ ದೊಡ್ಡ ಸುದ್ದಿಯಾಗಿ ಜನ ಭದ್ರಣ್ಣನ ಸ್ಟುಡಿಯೊಕ್ಕೆ ಎಡತಾಕತೊಡಗಿದರು. ಈ ಸುದ್ದಿಯನ್ನು ಭದ್ರಣ್ಣನೇ ಸಿಕ್ಕವರ ಬಳಿ ಹೇಳಿ ಜನರು ತನ್ನ ಸ್ಟುಡಿಯೊಕ್ಕೆ ಬರುವಂತೆ ಮಾಡಿದ್ದ!

''ನಮ್ಮ ತೋಟದಲ್ಲಿ ಅಡಿಕೆ ಸಸಿ ಸತ್ತಿಲ್ಲವಲ್ಲಾ. ಹ್ಯಾಗೆ ಅರ್ಜಿ ಕೊಡೋದು ಭದ್ರಣ್ಣ'' ಎಂದವರಿಗೆ ಹೇಳಿದ, "ಅಯ್ಯೋ, ನಿಮಗ್ಯಾಕ್ರೀ ಅದರ ಚಿಂತೆ. ಪಾಶಣ್ಣನ ತೋಟದ ಎಲ್ಲಾ ಫೋಟೊ ನನ್ನ ಹತ್ರ ಉಂಟು. ಆ ಹಂದಿ ತಿಂದು ಹಾಕಿದ ಅಡಿಕೆ ಸಸಿ ಎದುರು ನಿಮ್ಮ ಫೋಟೊ ಜೋಡಿಸಿದರಾಯಿತು. ಅದನ್ನೆಲ್ಲಾ ಯಾರು ಕೇಳ್ತಾರ್ರೀ. ಸರ್ಕಾರದ ದುಡ್ಡು ಬಂದ್ರಾತೋ ಇಲ್ವೋ, ಮೊದಲು ನಿಮ್ಮ ಫೋಟೊ ಹೊಡೆಸಿ. ಉಳಿದ್ದನ್ನೆಲ್ಲಾ ನಾನು ಮಾಡ್ತೇನೆ...''

ಜಮೀನು ಇದ್ದವರ ಸಾವಿರಾರು ಅರ್ಜಿಗಳು ಫೋಟೊ ಸಹಿತ ರೆಡಿಯಾಗಿ ಅರಣ್ಯ ಇಲಾಖೆಗೆ ರವಾನೆಯಾದವು. ಅರಣ್ಯ ಇಲಾಖೆ ಅಧಿಕಾರಿಗಳಿಗೆ ದಿನನಿತ್ಯ ಬರುವ ನೂರಾರು ಅರ್ಜಿಗಳನ್ನು ಎಲ್ಲಿಡಬೇಕೆಂಬುದು ಬಗೆಹರಿಯದೇ ತಲೆನೋವಾಯಿತು. ಕಚೇರಿಯ ಬೀರು, ಕಪಾಟುಗಳು ತುಂಬಿ ತುಳುಕಾಡತೊಡಗಿದವು. ಕೊನೆಗೊಮ್ಮೆ ಹಿರಿಯ ಅಧಿಕಾರಿಗಳು ತೋಟಗಳಿಗೆ ಭೇಟಿ ನೀಡಿ ಸರ್ವೆ ನಡೆಸಿದಾಗ ಅರ್ಜಿಗಳು ನಕಲಿ ಎಂಬುದು ಸಾಬೀತಾಯಿತು. ಈ ಮಧ್ಯೆ ಪಾಶಣ್ಣನ ನಿಜವಾದ ಪರಿಹಾರದ ಅರ್ಜಿಗೂ ನಕಲಿಯ ಬಿಸಿ ತಟ್ಟಿ, ಯಾವುದು ನಕಲಿ ಯಾವುದು ಅಸಲಿ ಎಂಬುದನ್ನು ಅಧಿಕಾರಿಗಳಿಗೆ ತಿಳಿಯಲಾಗದೇ ಎಲ್ಲ ಅರ್ಜಿಗಳೂ ಇಲಾಖೆಯಿಂದ ಸಾರಾಸಗಟಾಗಿ ತಿರಸ್ಕೃತವಾದವು.

ಈ ಸುದ್ದಿ ತಿಳಿದ ಪಾಶಣ್ಣ ತಲೆ ಮೇಲೆ ಕೈಹೊತ್ತು ಕುಳಿತ.

**ಟಿ.ಎಂ. ಶೇಷಗಿರಿ**

ಸಾಗರ ತಾಲ್ಲೂಕಿನ ತುಮರಿಯವರು. ವೃತ್ತಿಯಲ್ಲಿ ಕೃಷಿಕ. ಕಲೆ, ಸಾಹಿತ್ಯ, ಪತ್ರಿಕೋದ್ಯಮದಲ್ಲಿ ಕೆಲಸ ಮಾಡಿದ್ದಾರೆ. 'ಕುತೂಹಲದ ಕಥೆಗಳು', 'ದೇವಾಲಯದ ಬುಡದಲ್ಲೊಂದು ಗಿಡ' ಪ್ರಕಟಿತ ಕಥಾಸಂಕಲನಗಳು. 'ಯಕ್ಷ ಬಳಗ' ಸಂಸ್ಥೆ ಹುಟ್ಟುಹಾಕಿ, ರಾಜ್ಯದಾದ್ಯಂತ 3,500ಕ್ಕೂ ಹೆಚ್ಚು ಯಕ್ಷಗಾನ ಪ್ರದರ್ಶನಗಳನ್ನು ನೀಡಿದ್ದಾರೆ. ಯಕ್ಷಗಾನದ ಭಾಗವತ, ಪ್ರಸಂಗಕರ್ತ. 'ಸಿಗಂದೂರು ಕ್ಷೇತ್ರ ಮಹಾತ್ಮೆ', 'ವಂದೇ ಗೋ ಮಾತರಂ', 'ಸ್ವರ್ಗ ಸಂತಾಪ' ಮುಂತಾಗಿ 12ಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದು, ಸಾವಿರಾರು ಪ್ರದರ್ಶನಗಳಾಗಿವೆ. ಭದ್ರಾವತಿ ಆಕಾಶವಾಣಿ ಕಲಾವಿದರಾಗಿರುವ ಅವರು ದೂರದರ್ಶನದಲ್ಲೂ ಕಾರ್ಯಕ್ರಮ ನೀಡಿದ್ದಾರೆ.